International Journal of Kannada Research 2024; 10(1): 89-94




International Journal of Kannada Research
www.kannadajournal.com

ISSN: 2454–5813
IJKR 2024; 10(1): 89-94
© 2024 IJKR
www.kannadajournal.com
Received: 24-11-2023
Accepted: 30-12-2023

**ಜಿ. ಎಂ. ಹೇಮಲತ**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

**ಡಾ. ಹೆಚ್. ವಿಶ್ವನಾಥ್**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಜಿ. ಎಂ. ಹೇಮಲತ**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

# ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಧ್ವನಿಗಳು

**ಜಿ. ಎಂ. ಹೇಮಲತ, ಡಾ. ಹೆಚ್. ವಿಶ್ವನಾಥ್**

**ಪೀಠಿಕೆ**

ಕನ್ನಡ ಸಾಹಿತ್ಯಕ್ಕೆ ಒಂದೂವರೆ ಸಾವಿರ ವರ್ಷಗಳಷ್ಟು ಕಾಲದ ಸುಧೀರ್ಘ ಇತಿಹಾಸವಿದೆ. ಸಾಧಾರಣವಾಗಿ ಪ್ರಾಚೀನ ಕನ್ನಡ ಸಾಹಿತ್ಯವೆಂದರೆ ಒಂಭತ್ತನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದ ಅಂತ್ಯದ (೮೫೦–೯೦೦)ಅವಧಿಯನ್ನು ಗಣನೆಗೆ ತೆಗೆದುಕೊಳ್ಳಬಹುದಾಗಿದೆ. ಪ್ರಾಚೀನ ಕನ್ನಡ ಕವಿಯತ್ರಿಯರೆಂದರೆ ಇದೇ ಅವಧಿಯಲ್ಲಿ ಕೃತಿ ರಚನೆ ಮಾಡಿದ ಮಹಿಳೆಯರನ್ನು ಪರಿಗಣಿಸಬಹುದಾಗಿದೆ.ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದ ಒಂದು ಗಂಭೀರವಾದ ಚಿಂತನೆಯಾಗಿದ್ದು ಹೋರಾಟ ಮತ್ತು ಚಳುವಳಿಗಳು ಪುರುಷ ಪ್ರಧಾನತೆಯ ವಿರುದ್ಧ ಕ್ರಿಯಾತ್ಮಕವಾಗಿ ಸಿಡಿದೇಳುವ ಒಂದು ರೂಪವಾಗಿದೆ.ಸ್ತ್ರೀವಾದವು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೇಗೆ ಪ್ರತಿಪಾದಿತವಾಗಿದೆ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದದ ಬೇರುಗಳು ಬರಹ ರೂಪದಲ್ಲಿ ಹೇಗೆ ಅಚ್ಚಾಗಿದೆ ಎಂಬುದನ್ನು ತಿಳಿಯಬಹುದಾಗಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ಮಹಿಳೆಯರು ಸಮಾಜದ ಎಲ್ಲ ರಂಗಗಳಲ್ಲೂ ಕ್ರಿಯಾಶೀಲರಾಗುವಂಥ ಅವಕಾಶ ಕಲ್ಪಿಸಿದ ಕಾಲ.ಈ ಅವಧಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರು.ಸಾರಸ್ವತ ಲೋಕದಲ್ಲಿ ವಚನಯುಗದಲ್ಲಿದ್ದ ಸಾಮಾಜಿಕ ಸ್ಥಿತಿಯು ಮೌಢ್ಯದಿಂದ ಅಂಧಕಾರದಲ್ಲಿ ಮುಳುಗಿತ್ತು.ಇಂತಹ ಕೊಳಕು ನಾರುತ್ತಿದ್ದ ಸಮಾಜದೆದುರು ಮೊದಲ ಬಾರಿಗೆ ಬಂಡೆದ್ದವರೆ ವಚನಕಾರ್ತಿಯರು. 'ನೀ ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲಪ' ಎಂಬ ಅಂದಿನ ಸಾಮಾಜಿಕ ಧೋರಣೆಯು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಅಂದಿನ ಸಮಯದಲ್ಲಿ ಶರಣು ಶರಣಿಯರು ಹೆಣ್ಣಿಗೆ ಸಮಾನತೆಯನ್ನು ತಂದುಕೊಟ್ಟ ರೀತಿ ಇಂದಿನವರಿಗೆ ಅಗತ್ಯವಾಗಿದೆ. ಹೆಣ್ಣು ಕೂಡ ಪುರುಷನಂತೆ ಮಾತನಾಡಬಲ್ಲಳು, ಬರೆಯಬಲ್ಲಳು, ಯೋಚಿಸಬಲ್ಲಳು ಎಂಬುದನ್ನು ಮೊಟ್ಟಮೊದಲ ಬಾರಿಗೆ ವಚನಕಾರ್ತಿಯರು ಜಗತ್ತಿಗೆ ತೋರಿಸಿಕೊಟ್ಟರು.ಮಹಾದೇವಿಯಕ್ಕನಂತೂ ಇಡೀ ಪ್ರಪಂಚವೇ ಬೆರಗಿನಿಂದ ಬೆಚ್ಚಿಬೀಳುವಂತಹ ವ್ಯಕ್ತಿತ್ವದವಳಾಗಿದ್ದು, ಪಿತೃಪ್ರಧಾನ ಸಮಾಜ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತಂಥವಳು.ಇವಳ ಜತೆಗೆ ಹಲವಾರು ಮಹಿಳೆಯರು ದನಿಗೂಡಿಸಿ ವಚನಗಳನ್ನು ರಚಿಸಿದರು.ಮೈಸೂರು ಒಡೆಯರ ಪ್ರಮುಖ ದೊರೆಗಳಲ್ಲಿ ಒಬ್ಬನಾದ ಚಿಕ್ಕದೇವರಾಯನ ಕಾಲದಲ್ಲಿ ಸಂಚಿಯಹೊನ್ನಮ್ಮ, ಶೃಂಗಾರಮ್ಮನಂತವರು ಅನಂತರ ದಳವಾಯಿ ದೊಡ್ಡೇಂದ್ರನ ಮಡದಿ ಚೆಲುವಾಂಬೆ ಸಾಹಿತ್ಯ ರಚನೆಗೆ ತೊಡಗಿದರು.ಅತ್ತಿಮಬ್ಬೆ ಸಹ ಹತ್ತನೆಯ ಶತಮಾನದಲ್ಲಿ ಸ್ವತ: ಬರಹಗಾರ್ತಿಯಾಗಿದ್ದು, ಸಾಹಿತ್ಯಾಸಕ್ತಿ ವ್ಯಕ್ತಿಪಡಿಸಿದ ಪ್ರಥಮ ಮಹಿಳೆಯಾಗಿದ್ದಾಳೆ. ವಚನ ಸಾಹಿತ್ಯದಲ್ಲಿ ಸಮಾಜದಲ್ಲಿದ್ದ ಲಿಂಗತಾರತಮ್ಯದ ವಿರುದ್ಧ ಪ್ರತಿಭಟನೆ ವ್ಯಕ್ತವಾಗುತ್ತದೆ.ಇಂತಹ ಸಮಾನ ಅವಕಾಶವಿರುವ ಸಮಾಜದಲ್ಲಿ ಹೆಣ್ಣು ತನ್ನ ಅನಿಸಿಕೆಗಳನ್ನು ಮುಕ್ತವಾಗಿ ತೆರೆದಿಡಲು ಸಾಧ್ಯವಾಯಿತು.ಇವು ಇಂದಿನ ಮಹಿಳಾವಾದಿ ಚಿಂತನೆಗಳಿಗೆ ಮಾದರಿಗಳಾದವು. ಸ್ತ್ರೀಯರನ್ನು ಪುರುಷರ ಅಧೀನದಲ್ಲಿಟ್ಟು ಆಳುವ ಪ್ರವೃತ್ತಿ ಮತ್ತು ಅವಳ ಅಸ್ತಿತ್ವವನ್ನು ಲೈಂಗಿಕತೆಗೆ ಮೀಸಲುಗೊಳಿಸುವುದಕ್ಕೆ ವಿರುದ್ಧವಾಗಿ ಸ್ತ್ರೀಗೆ ಸಮಾನ ನೆಲೆಯ ಗೌರವವನ್ನು ದೊರಕಿಸಿಕೊಡುವಂತಹ ಅಂಶಗಳು ಇಲ್ಲಿ ದೊರೆತವು.ಒಟ್ಟಿನಲ್ಲಿ ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಸ್ತ್ರೀವಾದಿ ಮಹಿಳೆಯರ ಕೊಡುಗೆ ಅಪಾರವಾಗಿದೆ.

**ಪ್ರಾಚೀನ ಕನ್ನಡ ಸಾಹಿತ್ಯದ ಕಾಲಘಟ್ಟ (೮ನೇ ಶತಮಾನ – ೧೨ನೇ ಶತಮಾನ)**

ಪ್ರಾಚೀನ ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯದ ವಿರುದ್ಧ ತನ್ನ "ದೇಸಿಯತೆ"ಯನ್ನು ಪ್ರತಿಪಾದಿಸುವ ಮೂಲಕ ಕ್ರಾಂತಿಕಾರಕ ಧೋರಣೆಯನ್ನು ತೋರಿಸಿತು.ಆದರೆ ಸ್ತ್ರೀಯರ ಸ್ಥಾನಮಾನದ ವಿಚಾರದಲ್ಲಿ ಅದರ ನಿಲುವುಗಳು ಪ್ರಧಾನ ಸಂಸ್ಕೃತಿಯ ಸಾಹಿತ್ಯದಿಂದ ಭಿನ್ನವಾಗಿರಲಿಲ್ಲ. ಇದು ಪುರುಷ ಪ್ರಧಾನ ದೃಷ್ಟಿಕೋನದಿಂದ ರೂಪುಗೊಂಡ ತಾತ್ವಿಕ ಚಿಂತನೆಯ ಫಲವಾಗಿದೆ.ಜೈನ ಪುರಾಣದಲ್ಲಿ, ಮಹಿಳೆಯರನ್ನು ತೀರ್ಥಂಕರರ ತಾಯಿ, ಹೆಂಡತಿ ಮತ್ತು ಹೆಣ್ಣುಮಕ್ಕಳಂತೆ ಚಿತ್ರಿಸಲಾಗಿದೆ ಮತ್ತು ಅವರ ಪಾತ್ರಗಳು ತುಂಬಾ ಅಧೀನವಾಗಿವೆ. ಐರಿಳಿತಗಳಿಂದ ಕೂಡಿದ ಮತ್ತು ವಿಮೋಚನೆಯೆಡೆಗಿನ ಪ್ರಯಾಣದಲ್ಲಿ ಪಾಪದ ಫಲವಾಗಿ ಹೆಣ್ಣು ಮಗುವಿನ ಜನನವನ್ನು ಚಿತ್ರಿಸಲಾಗಿದೆ. ಈ ಜೈನ ಪುರಾಣಗಳಲ್ಲಿ ಜನ್ಮಕ್ಕೆ ಮೋಕ್ಷವಿಲ್ಲ. ವಿಕಾಸದ ಈ ಹಂತದಲ್ಲಿ, ಅವಳು ಅನಿವಾರ್ಯವಾಗಿ ಪುರುಷನಾಗಿ ಮೋಕ್ಷವನ್ನು ಸಾಧಿಸುತ್ತಾಳೆ. ಇಲ್ಲಿ ಸ್ತ್ರೀಯರ ಅತಂತ್ರತೆಯ ಕಲ್ಪನೆ ಗೋಚರಿಸುತ್ತದೆ.ಸಾಹಿತ್ಯದಲ್ಲಿ 'ವೀರ'ರಸವನ್ನು ಪ್ರಧಾನವಾಗಿ ರೂಪಿಸುವವರು ಕೂಡ ಪುರುಷ ಪರ ಮೌಲ್ಯಗಳನ್ನು ವಿಜೃಂಭಿಸುವ ಬಗೆಯಾಗಿದೆ.ಜನಾಂಗದ ಪ್ರಾಬಲ್ಯವು ಪುರುಷ ಪರ ಮೌಲ್ಯಗಳನ್ನು ಎತ್ತಿ ಹಿಡಿಯುವ ಮಾರ್ಗವಾಗಿದೆ. ಧೈರ್ಯ ಮತ್ತು ಸಾಹಸವು ಗಂಡುಗುಣಗಳು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ, ಅವನ ಯುದ್ಧದ ಬಯಕೆ, ಸಾಮ್ರಾಜ್ಯಶಾಹಿ ವಿಸ್ತರಣೆ ಮತ್ತು ರಾಜಕೀಯ ಮಹತ್ವಾಕಾಂಕ್ಷೆಗಳು ಸಾಹಿತ್ಯಿಕ ಸಂದರ್ಭಗಳಲ್ಲಿ ಮನ್ನಣೆಯನ್ನು ಪಡೆಯುತ್ತವೆ. ಆತನ "ಬಹು ವಲ್ಲಭತ್ವ' ಕೂಡ ಈ ಪರಾಕ್ರಮದ ಒಂದು ಅಂಗವಾಗಿಯೇ ಗ್ರಹಿಸಲ್ಪಡುತ್ತದೆ.ಅನೇಕ ಕಾವ್ಯಗಳಲ್ಲಿ ಸ್ತ್ರೀ ವರ್ಣನೆಗಳು ವಿಪುಲವಾಗಿ ಬಂದರೂ ಅದು ಶೃಂಗಾರ ರಸವನ್ನು ಸೃಷ್ಟಿಸುವುದಕ್ಕಾಗಿ ಮಾತ್ರ ಬಂದಿರುವುದರಿಂದ ಅದು ಸ್ತ್ರೀದೇಹದ ವರ್ಣನೆಯಲ್ಲೇ ಕೊನೆಯಾಗುತ್ತದೆ. ಪುರುಷನ ವಿಲಾಸೀ ಬದುಕನ್ನು ಚಿತ್ರಿಸುವಾಗ ಅವಳನ್ನು ಭೋಗ ವಸ್ತುವಿನಂತೆ ಚಿತ್ರಿಸಲಾಗುತ್ತದೆ, ಆದರೆ ವೈರಾಗ್ಯದ ಸಂದರ್ಭಗಳಲ್ಲಿ ಅವಳನ್ನು ರಾಗದ್ವೇಷಗಳ ಪ್ರತೀಕವಾದ ಮಾಯೆಯಾಗಿ ಚಿತ್ರಿಸಲಾಗುತ್ತದೆ. ಇದರಿಂದಾಗಿ ಸ್ತ್ರೀಯರ ಮನಸ್ಸು ಮತ್ತು ವ್ಯಕ್ತಿತ್ವವು ಸಂಪೂರ್ಣವಾಗಿ ಪ್ರತಿಬಿಂಬಿಸಲ್ಪಡುವುದಿಲ್ಲ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಸರಿಸಬಹುದಾದ ಮೊದಲ ಕವಯತ್ರಿ 'ಕಂತಿ'. ಈಕೆ ಅಭಿನವ ಪಂಪ ಅಥವಾ ನಾಗಚಂದ್ರನ ಕಾಲಕ್ಕೆ (೧೧ನೇ ಶತಮಾನ) ಸೇರಿದವಳೆಂದು ತಿಳಿದುಬರುತ್ತದೆ. ಇದಕ್ಕೆ ನಿಕರವಾದ ಆಧಾರಗಳು ಸಿಕ್ಕರೆ ಕನ್ನಡ ಕವಯತ್ರಿಯರಲ್ಲಿ ಇವಳೇ ಮೊದಲಿಗಳಾಗಿರುತ್ತಾಳೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. "ಅಧಿಕ ಕವೀಶ್ವರಿ, ಅಭಿನವ ವಾಗ್ದೇವಿ, ಎಂಬ ಬಿರುದುಗಳು ಇವಳಿಗಿದ್ದವು. ಈಕೆಯವೆಂದು ಕಂತಿ–ಹಂಪನ ಸಮಸ್ಯೆಗಳು ಎಂಬ ಕೆಲವು ಸಮಸ್ಯಾಪೂರಣ ಕಂದ ಪದ್ಯಗಳು ಲಭಿಸಿವೆ. ಇವು ಸಾಂದಾರ್ಭಿಕವಾಗಿ ಆಶುವಾಗಿ ರಚನೆಗೊಂಡ ಚಮತ್ಕಾರಭರಿತವಾದ ರಚನೆಗಳೇ ಹೊರತು ಅನುಭವದ ಹಿನ್ನೆಲೆಯಿಂದ ಬಂದಂಥವಲ್ಲ." ಹಾಗಾಗಿ ಈಕೆಯ ಅಸ್ತಿತ್ವವೇ ಸಂದೇಹಾಸ್ಪದವಾಗಿರುವುದರಿಂದ ಆಕೆ ಬರೆದಿದಾಳೆನ್ನಲಾದ 'ಕಂತಿ ಹಂಪನಸಮಸ್ಯೆಗಳು' ಬಗ್ಗೆ ಏನನ್ನೂ ಹೇಳಲು ಸಾಧ್ಯವಾಗುವುದಿಲ್ಲ.

ಆದರೆ ಈ ಕಾಲಘಟ್ಟದಲ್ಲಿ ಕೆಲವು ಅಸಾಮಾನ್ಯ ಸ್ತ್ರೀಯರ ಬಗೆಗೆ ಉಲ್ಲೇಖಗಳು ಕಾಣಿಸುತ್ತವೆ. ಕ್ರಿ.ಶ. ಸುಮಾರು ೯೦೦ ರರ ಕೋಲಾರ ಜಿಲ್ಲೆಯ ಕಾರುಬೆಲೆ ಶಾಸನದ "ನಾಗಾರ್ಜುನ ನಂದಿಯಬ್ಬೆಯರ ಮಗಳು ಸಾವಿ ನಿರ್ಮಿಡಿ ಸರ್ವಶಾಸ್ತ್ರ ಪ್ರಸಿದ್ಧಿ" ಎಂಬ ವಿಷಯ ತಿಳಿಸುತ್ತದೆ. ಈಕೆ ಸಕಲಶಾಸ್ತ್ರ ಪಾರಂಗತಳಾಗಿದ್ದು ತನ್ನ ಜ್ಞಾನಬಲದಿಂದಲೇ ಬೆಳಕಿಗೆ ಬಂದ ಪ್ರಥಮ ಮಹಿಳೆ. ಅತ್ತಿಮಬ್ಬೆಯ ಹೆಸರು ಕೂಡ ಹತ್ತನೇ ಶತಮಾನದಲ್ಲಿ ಕೇಳಿಬರುತ್ತದೆ. ಆಕೆ ಸ್ವತಃ ಬರಹಗಾರ್ತಿಯಲ್ಲವಾದರೂ ಜೈನ ಧಾರ್ಮಿಕ ಸಾಹಿತ್ಯವನ್ನು ಪ್ರಚುರಪಡಿಸುವ ಪೋಷಿಸುವ ಮೂಲಕ ತನ್ನ ಸಾಹಿತ್ಯಾಸಕ್ತಿಯನ್ನು ಮೆರೆದಿದ್ದಾಳೆ.ಇನ್ನು ಶಾಂತಲೆ ತನ್ನ ಕಲಾಸಕ್ತಿಯಿಂದ ಗಮನಸೆಳೆಯುತ್ತಾಳೆ. ಹಾಗಾಗಿ ಈ ಕಾಲಘಟ್ಟದಲ್ಲಿ ಎಲ್ಲೂ ಹೆಣ್ಣಿನ ಧ್ವನಿಗಳು ಕೇಳಿಸುವುದಿಲ್ಲ.

**ವಚನ ಯುಗ**

ಕನ್ನಡ ಸಾಹಿತ್ಯದ ಅಭಿವೃದ್ಧಿಯಲ್ಲಿ ೧೨ನೇ ಶತಮಾನವು ಪ್ರಮುಖವಾದ ಘಟ್ಟವಾಗಿದೆ. ಈ ಕಾಲದಲ್ಲಿ ವಚನ ಚಳವಳಿಯು ಉದಯಿಸಿತು.ಈ ಚಳವಳಿಯು ಎಲ್ಲ ಜಾತಿ–ವರ್ಗಗಳ ಜನರಿಗೆ ಧ್ವನಿಯನ್ನು ನೀಡಿತು.ಅಲ್ಲದೆ, ವರ್ಣ–ವರ್ಗ ಮತ್ತು ಲಿಂಗಭೇದಗಳನ್ನು ಮೀರಿ ಜನರನ್ನು ಒಗ್ಗೂಡಿಸುವುದು ಈ ಚಳವಳಿಯ ಪ್ರಧಾನ ಆಶಯವಾಗಿತ್ತು.

ಸನಾತನ ಧರ್ಮಕ್ಕೆ ಪ್ರತಿರೋಧವೊಡ್ಡುವ ಮೂಲಕ ಹುಟ್ಟಿಕೊಂಡ ವೀರಶೈವ ಧಾರ್ಮಿಕ ಕಲ್ಪನೆಯು 'ಪರ ಕ್ಕಿಂತ ಇಹ'ದ ಬದುಕನ್ನು ಮುಖ್ಯವಾಗಿ ಭಾವಿಸುತ್ತದೆ. ಆದ್ದರಿಂದ ಇದು ಸಾಮಾಜಿಕ ಚಳವಳಿಯಾಗಿಯೇ ಹೆಚ್ಚು ಪ್ರಚಲಿತವಾಗಯಿತು.ಸ್ಥಾಪಿತ ವ್ಯವಸ್ಥೆಯನ್ನೇ ಪಲ್ಲಟಗೊಳಿಸುವ ಮೂಲಕ ಪರ್ಯಾಯ ಸಾಮಾಜಿಕ ಮೌಲ್ಯಗಳನ್ನು ಇದು ಕಟ್ಟಿಕೊಡುತ್ತದೆ. ಈ ಎಲ್ಲ ಪ್ರಕ್ರಿಯೆಗಳಲ್ಲಿ ಹೆಣ್ಣು ಸಮಾನವಾಗಿ ಪಾಲ್ಗೊಳ್ಳುವದು ಈ ಚಳವಳಿಯ ವಿಶೇಷ.ವಚನ ಸಾಹಿತ್ಯದಲ್ಲಿ ಲಿಂಗಭೇದ ವ್ಯವಸ್ಥೆಯ– ವಿರುದ್ಧ ತಾತ್ವಿಕ ಪ್ರತಿಭಟನೆ ವ್ಯಕ್ತವಾಗುತ್ತದೆ.ಈ ಪ್ರತಿಭಟನೆ ಹೆಣ್ಣಿನಿಂದ ಮಾತ್ರವಲ್ಲದೇ ಗಂಡಿನಿಂದಲೂ ಅಭಿವ್ಯಕ್ತಗೊಳ್ಳುವದು ಈ ಸಂದರ್ಭದ ವಿಶೇಷ. ಲಿಂಗಭೇದವಿಲ್ಲದ ಮುಕ್ತ ಸಮಾಜದಲ್ಲಿ ಹೆಣ್ಣು ತನ್ನ ಅನಿಸಿಕೆಗಳನ್ನು ಸಹಜವಾಗಿ ಅಭಿವ್ಯಕ್ತಿಸುವುದು ಸಾಧ್ಯವಾಯಿತು. ಇಂದಿನ ಸ್ತ್ರೀವಾದಿ ಚಿಂತನೆಗಳಿಗೆ ಇವು ಇತ್ಯಾತ್ಮಕ ಮಾದರಿಗಳನ್ನು ಕಟ್ಟಿಕೊಡಬಲ್ಲವು. ಹೆಣ್ಣಿನ ಅಸ್ತಿತ್ವವನ್ನು ಲೈಂಗಿಕತೆಗೆ ಸೀಮಿತಗೊಳಿಸುವ, ಅವಳನ್ನು ಅಧೀನ ನೆಲೆಯಲ್ಲಿಟ್ಟು ಆಳುವ ಪ್ರವೃತ್ತಿಗೆ ವಿರುದ್ಧವಾಗಿ ಸ್ತ್ರೀತ್ವಕ್ಕೆ ಸಮಾನ ನೆಲೆಯ ಗೌರವವನ್ನು ದೊರಕಿಸಿಕೊಡುವಂತಹ ಅಭಿವ್ಯಕ್ತಿಗಳನ್ನು ಇಲ್ಲಿ ಕಾಣಬಹುದು. ಈ ಸಂದರ್ಭದಲ್ಲಿ ವಿಪುಲವಾದ ವಚನ ಸಾಹಿತ್ಯ ಹರಿದು ಬಂದಿತು.ಈ ವಚನ ಸಾಹಿತ್ಯದ ಬಗೆ ಚರ್ಚೆಯಲ್ಲಿ ತೊಡಗಿರುವವರು ವೇದಶಾಸ್ತ್ರಗಳಲ್ಲಿ ಪಾಂಡಿತ್ಯರಿದ್ದವರಲ್ಲ, ಶ್ರೇಷ್ಠಕುಲದಲ್ಲಿ ಹುಟ್ಟಿದವರಲ್ಲ, ಗಂಡು–ಹೆಣ್ಣೆಂಬ, ವಿದ್ಯಾವಂತ–ಅವಿದ್ಯಾವಂತರೆಂಬ ಬೇದವಿಲ್ಲದೆ ಆತ್ಮ ಪ್ರತ್ಯಯವಿರುವ ಮತ್ತು ವಿಚಾರಮಾಡಲು ಸಮರ್ಥರಾದಂತಹ ವಿಚಾರವಂತ ವ್ಯಕ್ತಿಗಳೆ ಈ ಸಾಹಿತ್ಯದ ನಿರ್ಮಾಪಕರು.ಅರಿವಿನ ಬೇರಿಂದ ಪ್ರಶ್ನೆಗಳ ಸಂಘರ್ಷದಲ್ಲಿ, ಸಂದೇಹಗಳ ತಾಕಲಾಟದಲ್ಲಿ ಹೊಸ ವಿಚಾರ ಜನ್ಮತಾಳುತ್ತದೆ.ಇಂತಹ ವಿಚಾರಗಳ ವಿಶ್ಲೇಷಣೆಯೇ ವೈಚಾರಿಕತೆ. ಅಂದಂದಿನ ಸಮಾಜ ವ್ಯವಸ್ಥೆಯಲ್ಲಿನ ಮೌಲ್ಯಗಳನ್ನು ಪ್ರಶ್ನಿಸುವುದರ ಮುಖಾಂತರ, ಸಂದೇಹಪಡುವುದರೊಂದಿಗೆ ಒಬ್ಬ ವಿಚಾರವಾದಿ, ಹೊಸ ಮೌಲ್ಯಗಳ ಸೃಷ್ಟಿಗೆ ಕಾರಣನಾಗುತ್ತಾನೆ, ಆಗ, ಈ ಮೌಲ್ಯ–ಮೌಲ್ಯಗಳ ನಡುವೆ ನಡೆವ ಸಂಘರ್ಷ, ಬದುಕು–ಬದುಕುಗಳ ನಡುವೆ ನಡೆಯುವ ಸಂಘರ್ಷವಾಗಿ ಹೊಸ ಬದುಕಿನ ಹುಟ್ಟಿಗೆ ನಾಂದಿ ಹಾಡುತ್ತದೆ. ವಾಸ್ತವತೆಯ ಹಿನ್ನೆಲೆಯಲ್ಲಿ ಜನಪರವಾಗಿ ಆಲೋಚಿಸುವುದೇ ನಿಜವಾದ ವೈಚಾರಿಕತೆ.ವಸ್ತುನಿಷ್ಠವಾದ ಆಧಾರಗಳ ನಡುವೆ ವೈಚಾರಿಕತೆ ಹುಟ್ಟುತ್ತದೆ.ಇಂತಹ ವೈಚಾರಿಕತೆ ಅಂದಂದಿನ ಸಮಾಜನ ಜನಸಮುದಾಯದ ಆರೋಗ್ಯಕರವಾದ

ಬೆಳವಣಿಗೆಗೆ ಸಹಾಯಕವಾಗುತ್ತದೆ.ಇದಕ್ಕೆ ವಿಚಾರಕ್ರಾಂತಿಯೆಂದು ಕರೆಯಬಹುದು.

ನಿಜವಾದ ಕ್ರಾಂತಿ ವೈಚಾರಿಕ ನೆಲೆಯನ್ನೊಳಗೊಂಡಿರುತ್ತದೆ.ಸ್ಥಗಿತಗೊಂಡ ಸಮಾಜದ ಅಮೂಲಾಗ್ರ ಬದಲಾವಣೆಗೆ ಮೊಟ್ಟಮೊದಲನೆಯ ಅನಿವಾರ್ಯತೆಯೆಂದರೆ, ವೈಚಾರಿಕತೆ, ಮನುಷ್ಯನ ವಿಚಾರಗಳನ್ನು ಬೆಳೆಸದೆ, ಆತನ ಶೋಷಿತ ಬದುಕನ್ನು ಬದಲಿಸಲಿಕ್ಕಾಗುವುದಿಲ್ಲ. ಆದ್ದರಿಂದ ನಿಜವಾದ ಕ್ರಾಂತಿಯ ಪ್ರಾರಂಭವನ್ನು ವೈಚಾರಿಕತೆ ಮಾಡುತ್ತದೆ.

ಮಹಿಳಾ ವಚನಗಾರ್ತಿಯರಲ್ಲಿ ಮಹಾದೇವಿಯಕ್ಕ ಶರಣಯುಗದ ಸಾಮಾಜಿಕ, ಸಾಹಿತ್ಯಿಕ ಹಾಗೂ ಧಾರ್ಮಿಕ ಕ್ರಾಂತಿಗಳ ಪ್ರತೀಕವಾಗಿ ತನ್ನ ನಿರ್ಮಾಣಶಕ್ತಿಯಿಂದ ಇತರ ಕವಯತ್ರಿಗಳಿಗೆ ಆದರ್ಶಳಾಗಿದ್ದಾಳೆ.ಮೋಳಿಗೆ ಮಹಾದೇವಿ, ಲಿಂಗಮ್ಮ, ಕಾಳವ್ವೆ, ನೀಲಾಂಬಿಕೆ, ಗಂಗಾಂಬಿಕೆ, ನಾಗಲಾಂಬಿಕೆ, ಮುಕ್ತಾಯಕ್ಕ ಮೊದಲಾದ ವಚನಕಾರ್ತಿಯರ ರಚನೆಗಳಿಂದ ಕನ್ನಡ ಸಾಹಿತ್ಯ ಶ್ರೀಮಂತವಾಯಿತು.ಈ ತನಕ ಸುಮಾರು ೩೫ ಜನ ವಚನಕಾರ್ತಿಯರನ್ನು ಗುರುತಿಸಲಾಗಿದೆ.ಶಿವಶರಣರ ಕಾಲದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹವಿತ್ತು ಎಂಬುದಕ್ಕೆ ಆ ಕಾಲದ ಮಹಿಳೆಯರು ರಚಿಸಿದ ವಚನಗಳೆ ಸಾಕ್ಷಿ.

"ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ
ಸತಿಪತಿಗಳೊಂದಾಗದವರ ಅಮೃತದೊಳು ವಿಷವ ಬೆರೆಸಿದಂತೆ
ಕಾಣಾ ರಾಮನಾಥ"

ಆಧ್ಯಾತ್ಮ ಎನ್ನುವುದು ಸಂಸಾರಕ್ಕೆ ವಿರೋಧವಾದುದಲ್ಲ, ಸನ್ಯಾಸವೆಂದರೆ, ಈ ವಾಸ್ತವ ಬದುಕಿನಿಂದ ದೂರ ಸರದು ಕಾಡು–ಮೇಡುಗಳಿಗೆ ಹೋಗುವ ವಿಧಾನವಲ್ಲ, ಹೆಣ್ಣು ಎಂಬುದು ತಪೋವಿಘ್ನಕಾರಿಯಾದ ಮಾಯೆ ಅಲ್ಲ, ಈ ಜಗತ್ತು ಮಿಥ್ಯ ಅಲ್ಲ ಸತ್ಯ. ಈ ಚಿಂತನೆಗಳು ವೈದಿ–ಬೌದ್ಧ–ಜೈನ ತತ್ವಗಳ ನಿಲುವಿಗೆ ತೋರಿದ ಪ್ರತಿಕ್ರಿಯೆಗಳಾಗಿವೆ. ಹಾಗೆಯೇ ಜೀವನ ಪ್ರೀತಿಯನ್ನು ಆದರ್ಶವನ್ನು ಒಟ್ಟಿಗೆ ನೋಡುವ ದೃಷ್ಟಿಕೋನದ ಪರಿಣಾಮಗಳಾಗಿವೆ. ಸಂಸಾರವನ್ನು ಶಿವಯೋಗವನ್ನು ಹೊಂದಾಣಿಕೆಗೊಳಿಸುವ ಈ ನಿಲುವು ಹೆಣ್ಣಿಗೆ ಆಧ್ಯಾತ್ಮಿಕ ಸಮಾನತೆಯನ್ನು ವೈಚಾರಿಕ ಸ್ವಾತಂತ್ರ್ಯವನ್ನು ತಂದುಕೊಡುವುದರ ಮೂಲಕ ವಚನ ಚಳುವಳಿಯಲ್ಲಿ ಅವರೂ ಸಕ್ರೀಯವಾಗಿ ಪಾಲುಗೊಳ್ಳುವ ಅವಕಾಶ ಲಭಿಸಿದಂತಾಯಿತು.

**ಗೊಗ್ಗವ್ವೆ**

ಜೈವಿಕ ಮೂಲದ ಅಸಮಾನತೆಯ ಪರಿಕಲ್ಪನೆಯನ್ನೇ ಪ್ರಶ್ನಿಸುವ ಕ್ರಾಂತಿಕಾರಿ ನಿಲುವನ್ನು ಗೊಗ್ಗವ್ವೆ ಎಂಬ ವಚನಕಾರ್ತಿ ಪ್ರಕಟಿಸುತ್ತಾಳೆ.

"ಮೊಲೆಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥಾ"

ಈ ವಚನದಲ್ಲಿ, ಲಿಂಗತಾರತಮ್ಯದ ಬಗ್ಗೆ ಗೊಗ್ಗವ್ವೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಬ್ಬ ವ್ಯಕ್ತಿಯು ಮೊಲೆಗಳು ಮತ್ತು ಮುಡಿಯನ್ನು ಹೊಂದಿದ್ದರೆ ಅವಳು ಹೆಣ್ಣು, ಗಡ್ಡ ಮತ್ತು ಮೀಸೆಯನ್ನು ಹೊಂದಿದ್ದರೆ ಅವನು ಗಂಡು ಎಂದು ಜನರು ನಂಬುತ್ತಾರೆ.ಆದರೆ ಈ ಭೇದವೆಲ್ಲಾ ಹೊರಗಿನ ದೇಹದ ರಚನೆಯನ್ನು ಆಧರಿಸಿದೆ.ಆಳದಲ್ಲಿರುವ ಆತ್ಮವು ಹೆಣ್ಣು ಅಥವಾ ಗಂಡು ಎಂಬುದನ್ನು ಈ ಭೇದಗಳು ನಿರ್ಧರಿಸುವುದಿಲ್ಲ. ಆತ್ಮವು ಲಿಂಗರಹಿತವಾಗಿದೆ.ಇಲ್ಲಿ ಗೊಗ್ಗವ್ವೆ ಜೈವಿಕ ಭಿನ್ನತೆಯನ್ನು ಅಮುಖ್ಯವಾಗಿ ಪರಿಗಣಿಸಿ ಜ್ಞಾನದ ಸ್ವರೂಪಕ್ಕೆ ಲಿಂಗತ್ವದ ಹಂಗಿಲ್ಲವೆಂದು ಸಾರುತ್ತಾಳೆ. ಇಲ್ಲಿ ವ್ಯಕ್ತಿತ್ವದ ದ್ವಿಲಿಂಗತ್ವದ ಕಲ್ಪನೆಯನ್ನು ಮಂಡಿಸುತ್ತದೆ.ಈ ಕಲ್ಪನೆಯು ಜೈವಿಕ ಅಸ್ತಿತ್ವದ ಆಧಾರದ ಮೇಲೆ ಲಿಂಗವನ್ನು ವ್ಯಾಖ್ಯಾನಿಸುವುದನ್ನು ನಿರಾಕರಿಸುತ್ತದೆ. ಅದರ ಬದಲಿಗೆ, ಅದು ಲಿಂಗವನ್ನು ಒಂದು ಅಮೂರ್ತ, ಆಧ್ಯಾತ್ಮಿಕ ಗುಣಲಕ್ಷಣವೆಂದು ನೋಡುತ್ತದೆ. ಈ ನಿಲುವು ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ಬೇರೂರಿರುವ ಲಿಂಗ ಸಮಾನತೆಯ ತತ್ವವನ್ನು ಪ್ರತಿಬಿಂಬಿಸುತ್ತದೆ. ಇದೇ ಗೊಗ್ಗವ್ವೆ ಗಂಡು ಹೆಣ್ಣಿನ ಮಧ್ಯೆ ಅಸಮಾನ ನೆಲೆಯಲ್ಲಿ ರೂಪುಗೊಂಡ ಅಧಿಕಾರ ಸಂಬಂಧದ ಬಗೆಗೂ ತನ್ನ ವಚನದಲ್ಲಿ ಪ್ರಶ್ನಿಸುತ್ತಾಳೆ.

ಗಂಡು ಮೋಹಿಸಿ ಹೆಣ್ಣು ಹಿಡಿವಡೆ
ಅದು ಒಬ್ಬರ ಒಡವೆಯೆಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು

ಗೊಗ್ಗವ್ವೆ ಕೇಳುವ ಈ ಪ್ರಶ್ನೆ ಸ್ಥಾಪಿತ ಮೌಲ್ಯಗಳ ಬೇರನ್ನೇ ಅಲುಗಾಡಿಸುವಂತಹದು. ಈ ವಚನದಲ್ಲಿ, ಗೊಗ್ಗವ್ವೆ ಲಿಂಗ ಸಮಾನತೆಯ ಬಗ್ಗೆ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ.ಅವರ ಪ್ರಕಾರ ಗಂಡು ಮೋಹಿಸಿ ಹೆಣ್ಣನ್ನು ಹಿಡಿದರೆ, ಅದು ಗಂಡನ ಒಡವೆಯಾಗುತ್ತದೆ ಎಂದರೆ ಹೆಣ್ಣು ಗಂಡನ ಆಸ್ತಿಯಾಗುತ್ತಾಳೆ, ಮತ್ತು ಅವಳು ಗಂಡನಿಗೆ ಮಾತ್ರ ಸೇರಿದ್ದಾಳೆ.ಆದರೆ ಹೆಣ್ಣು ಗಂಡನನ್ನು ಮೋಹಿಸಿ ಹಿಡಿದರೆ ಅದು ಯಾವುದೇ ಒಬ್ಬರ ಒಡವೆಯಾಗಿರುವುದಿಲ್ಲ ಎಂದರೆ ಹೆಣ್ಣು ಸ್ವತಂತ್ರಳಾಗುತ್ತಾಳೆ.ಅವಳು ಗಂಡನಿಗೆ ಮಾತ್ರ ಸೇರಿರುವುದಿಲ್ಲ ಬದಲಿಗೆ ಅವಳು ತನ್ನದೇ ಆದ ಸ್ವಂತಿಕೆಯನ್ನು ಹೊಂದಿರುತ್ತಾಳೆ.

ಈ ವಚನವು ೧೨ ನೇ ಶತಮಾನದ ಭಾರತದಲ್ಲಿ ಲಿಂಗ ಸಮಾನತೆಯು ಎಷ್ಟು ಮುಖ್ಯವಾಗಿತ್ತು ಎಂಬುದನ್ನು ನಮಗೆ ತೋರಿಸುತ್ತದೆ.ಆ ಕಾಲದಲ್ಲಿ ಗಂಡುಗಳು ಹೆಣ್ಣುಗಳನ್ನು ತಮ್ಮ ಆಸ್ತಿಯಾಗಿ ಪರಿಗಣಿಸುತ್ತಿದ್ದರು. ಆದರೆ ಗೊಗ್ಗವ್ವೆ ಅಂಥ ಚಿಂತನೆಯನ್ನು ತೀವ್ರವಾಗಿ ವಿರೋಧಿಸಿದರು.ಅವರು ಹೆಣ್ಣು–ಗಂಡು ಸಮಾನರು ಎಂದು ವಾದಿಸಿದರು. ಈ ವಚನವು ಇಂದಿಗೂ ಪ್ರಸ್ತುತವಾಗಿದೆ.ಭಾರತೀಯ ಸಮಾಜದಲ್ಲಿ ಇನ್ನೂ ಲಿಂಗ ಅಸಮಾನತೆಗಳು ಉಳಿದಿವೆ. ಈ ವಚನವು ಲಿಂಗ ಸಮಾನತೆಗಾಗಿ ಹೋರಾಡಲು ನಮಗೆ ಪ್ರೇರಣೆ ನೀಡುತ್ತದೆ.

**ಅಕ್ಕಮಹಾದೇವಿ**

ಅಕ್ಕಮಹಾದೇವಿಯ ಕಾಲ ಸು. ೧೧೬೦ ಎನ್ನಬಹುದಾಗಿದೆ. ಗುರುವಿನ ಬಗೆಗೆ "ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಎನ್ನ ಭವಂ ನಾಸ್ತಿಯಾಯಿತು, ಎನ್ನ ತನ್ನಂತೆ ಮಾಡಿ, ಎನಗೆ ತನಗೆ ತೆರಪಿಲ್ಲದಂತೆ ಮಾಡಿ ತೋರಿದನು ನೋಡಾ" ಎನ್ನುವ ಸ್ತುತಿ ಕಂಡುಬರುತ್ತಾದರೂ ಗುರು ಯಾರು ಎನ್ನುವ ಬಗೆಗೆ ನಿರ್ದಿಷ್ಟವಾದ ಮಾಹಿತಿ ದೊರೆಯುವುದಿಲ್ಲ. ಆಕೆಯ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ. ಅಕ್ಕಮಹಾದೇವಿಯು ತನ್ನ ಜೈವಿಕ ಹೆಣ್ತನವನ್ನು ನಿರಾಕರಿಸಿದ್ದು, ಅವಳು ಚನ್ನಮಲ್ಲಿಕಾರ್ಜುನನ ಬಗ್ಗೆ ಹೊಂದಿದ್ದ ಅರ್ಪಣಾಭಾವ ಮತ್ತು ಏಕನಿಷ್ಠೆಯ ಕಾರಣವಾಗಿದೆ.

"ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನನಾಚದೆ ಬಂದಿರಣ್ಣಾ
ನಾರಿಯೆಂಬ ರೂಪಿಂಗೆ ನೀವು ಒಲಿಯಬಂದಿರಣ್ಣಾ
ಚನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ
ಸಹೋದರರು ಛೀ ಹೋಗಾ ಮರುಳೆ"

ಎನ್ನುತ್ತ ಚೆನ್ನಮಲ್ಲಿಕಾರ್ಜುನನ ಹೊರತಾಗಿ ಎಲ್ಲ ಪುರುಷರೂ 'ತನಗಾಗದ ಮೇಲೆ ಎಂಬ ನಿಲುವಿನಲ್ಲಿ ನಿಲ್ಲುತ್ತಾಳೆ.ಅಕ್ಕಮಹಾದೇವಿ ಒಬ್ಬ ಶರಣೆಯಾಗಿದ್ದರು.ಶರಣರು ಕಾಮ, ಕ್ರೋಧ, ಲೋಭ, ಮೋಹ, ಮದ, ಈರ್ಷೆ ಎಂಬ ಆರು ದುರ್ಗುಣಗಳನ್ನು ತ್ಯಜಿಸಿ, ಶಿವನಲ್ಲಿ ಶರಣಾಗತರಾಗುವ ಮೂಲಕ ಮೋಕ್ಷವನ್ನು ಪಡೆಯುವುದನ್ನು ಗುರಿಯಾಗಿಟ್ಟುಕೊಂಡಿದ್ದರು. ಅಕ್ಕಮಹಾದೇವಿಯು ಈ ಭೌತಿಕ ಪ್ರಪಂಚದ ವಸ್ತುಗಳನ್ನು ಅಥವಾ ಜೀವಿಗಳನ್ನು ಹೆಚ್ಚು ಮೌಲ್ಯೀಕರಿಸುವುದಿಲ್ಲ. ಅವರು ಶಿವನಲ್ಲಿ ಮಾತ್ರ ಸತ್ಯ ಮತ್ತು ಸುಖವನ್ನು ಕಂಡುಕೊಂಡರು.

ಈ ವಚನದ ಮೂಲಕ ಅಕ್ಕಮಹಾದೇವಿ, ಭೌತಿಕ ಪ್ರಪಂಚದ ಬಗ್ಗೆ ನಮ್ಮ ದೃಷ್ಟಿಕೋನವನ್ನು ಬದಲಾಯಿಸಲು ಪ್ರಯತ್ನಿಸುತ್ತಿದ್ದಾರೆ.ಅವರು ಹೇಳುವಂತೆ ಭೌತಿಕ ಪ್ರಪಂಚವು ನಮಗೆ ನಿಜವಾದ ಸಂತೋಷವನ್ನು ನೀಡುವುದಿಲ್ಲ. ನಾವು ಶಿವನಲ್ಲಿ ಶರಣಾಗತರಾಗಿ, ಭೌತಿಕ ಪ್ರಪಂಚದಿಂದ ಮುಕ್ತರಾಗಿ, ನಿಜವಾದ ಸಂತೋಷವನ್ನು ಕಂಡುಕೊಳ್ಳಬೇಕು.

ಸ್ತ್ರೀವಾದಿ ಸಂದರ್ಭದಲ್ಲಿ ಅಕ್ಕಮಹಾದೇವಿಯನ್ನು ಸ್ತ್ರೀ ವಿಮೋಚನೆಯ ಸಂಕೇತವಾಗಿ ಕಂಡಿದ್ದಾರೆ.ಆ ಕಾಲದಲ್ಲಿಯೇ ತನ್ನ ವ್ಯಕ್ತಿತ್ವದ ಸಹಜ ವಿಕಸನಕ್ಕೆ ಅಡ್ಡಿ ಯಾಗುವ ವಿವಾಹ ವ್ಯವಸ್ಥೆಯನ್ನೇ ಧಿಕ್ಕರಿಸುವ ನಿಲುವನ್ನು ಪ್ರಕಟಿಸಿದವಳು ಆಕೆ. 'ಯೋಗಾಂಗತ್ರಿವಿಧಿ' ಅಕ್ಕಮಹಾದೇವಿಯ ಪ್ರಮುಖ ಕೃತಿ. ಇದು ೬೭ತ್ರಿಪದಿಗಳಲ್ಲಿ ರಚಿತವಾಗಿದೆ. ಅವಳ ವಚನಗಳ ಬಹುಭಾಗ ನಿಜವಾಗಿಯೂ ರಸಾರ್ದ್ರವಾದದ್ದು, ಉಪಮಾನಗಳಿಂದ ಚಿತ್ರಕಲ್ಪನೆಗಳಿಂದ ಮನೋಹರವಾಗಿರತಕ್ಕದ್ದು, ಅವಳದು ಕವಿಯ ಹೃದಯ, ಕವಿಯ ಕಣ್ಣು ಎಂಬುದು ಸಾರತಕ್ಕದ್ದು ಎಂಬ ಮಾತು ಪ್ರಶಂಸನೀಯವಾದುದು. ಲಿಂಗವೇ ಬಂದೆನ್ನ ಅಂಗದೊಳು ನೆಲೆಸುತೆ ಅಂಗವನು ಲಿಂಗದೊಳಗಾದ ಕಾರಣದಿಂಹಿಂಗಿಹುದು ಎನ್ನ ಭವಭಯವುಎಂದುಲಿಂಗವನ್ನು ಅದರ ಶಕ್ತಿಯನ್ನು ಬಿಂಬಿಸುತ್ತಾಳೆ. ಆಕೆಯ ನಗ್ನತೆ ಕೂಡ ಪುರುಷ ಪ್ರಧಾನ ವ್ಯವಸ್ಥೆಗೊಡ್ಡಿದ ಪ್ರತಿರೋಧವೇ ಆಗಿದೆ. ಅಕ್ಕಮಹಾದೇವಿಯ ಜೀವನವು ಹೆಣ್ಣಿನ ಮೇಲೆ ಹೇರಿದ ಎಲ್ಲಾ ನಿರ್ಬಂಧಗಳನ್ನು ಮೀರಿದ ಮುಕ್ತ ಸ್ಥಿತಿಯನ್ನು ಪ್ರತಿಪಾದಿಸುತ್ತದೆ. ಅವರು ತಮ್ಮ ಜೈವಿಕ ಮಿತಿಯನ್ನು ಮೀರುವ ಮೂಲಕ ಪುರುಷ ಅಹಂ ಅನ್ನು ನಿರಸನಗೊಳಿಸಿದರು. ಅವರ ತಪ್ತತೆ ಮತ್ತು ವಿರಹಗಳ ಮುಕ್ತ ಅಭಿವ್ಯಕ್ತಿಯು ಅದುವರೆಗೂ ಕಾಣದ ಹೆಣ್ಣಿನ ಸಂವೇದನೆಯನ್ನು ಬೆಳಕಿಗೆ ತಂದಿತು.

ಅಕ್ಕಮಹಾದೇವಿಯ ಆಧ್ಯಾತ್ಮಿಕ ಸ್ವಾತಂತ್ರ್ಯದ ಹಂಬಲವು ಅವರನ್ನು ಸ್ಥಾಪಿತ ವ್ಯವಸ್ಥೆಗಳು ಮತ್ತು ಮೌಲ್ಯಗಳ ವಿರುದ್ಧ ಪ್ರತಿಭಟಿಸುವಂತೆ ಮಾಡಿತು.ಅವರು ಸ್ತ್ರೀಯರಿಗೆ ಸಾಂಪ್ರದಾಯಿಕವಾಗಿ ನಿಗದಿಪಡಿಸಲಾದ ಪಾತ್ರಗಳನ್ನು ತಿರಸ್ಕರಿಸಿದರು ಮತ್ತು ತಮ್ಮದೇ ಆದ ಧರ್ಮ ಮತ್ತು ಆಧ್ಯಾತ್ಮಿಕತೆಯನ್ನು ರೂಪಿಸಿದರು. ಆದಾಗ್ಯೂ, ಅವರ ಗುರಿ ವೈಯಕ್ತಿಕವಾಗಿ ಉನ್ನತ ಸ್ಥಿತಿಯನ್ನು ಸಾಧಿಸುವುದಾಗಿತ್ತು, ಆದ್ದರಿಂದ ಅವರ ಸ್ವತಂತ್ರ ಸ್ತ್ರೀಪ್ರಜ್ಞೆಯು ಸಾಮಾಜಿಕ ಬದಲಾವಣೆಗೆ ಕಾರಣವಾಗಲಿಲ್ಲ. ಅವನಿಗೆ ಸರ್ವಾಪರ್ಣಮಾಡಿಕೊಂಡ ಆಕೆಗೆ ತನ್ನ ಮಾನಾಪಮಾನದ ಪ್ರಶ್ನೆಯೂ ಬಾಧಿಸುವದಿಲ್ಲ. ಮಾನಾಪಮಾನದ ಪ್ರಶ್ನೆಯೇ ಮುಖ್ಯವಾದ ಸ್ತ್ರೀವಾದಿ ಚಿಂತನೆಗಳಿಗಿಂತ ಈ ನಿಲುವು ಭಿನ್ನವಾದುದು. ಈ ಭಿನ್ನತೆಯನ್ನು ಅಕ್ಕನ ಮಿತಿಯೆಂದು ಭಾವಿಸುವದು ಅಕ್ಕನನ್ನು ಅವಳ ಸಂದರ್ಭದ ಹೊರಗಿಟ್ಟು ನೋಡುವ ನಿಲುವಾಗಿದೆ.ಲೌಕಿಕದ 'ಬಂಧನ' ದಿಂದ ಮುಕ್ತವಾಗಿ ಅಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪ್ರಕಟಿಸುವ ಅಕ್ಕನ ನಿಲುವನ್ನು ಭಾರತೀಯ ಅನುಭಾವ ಪರಂಪರೆಯ ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ.ಅಕ್ಕಮಹಾದೇವಿಯು ಲಿಂಗಾಧಾರಿತ ಸಮಾಜ ವ್ಯವಸ್ಥೆಯ ಮೌಲ್ಯಗಳನ್ನು ಮೀರಿಸಿ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಸಾಧಿಸಿದರು. ಅವರ ಧೈರ್ಯ, ಛಲ ಮತ್ತು ಸ್ವಂತಿಕೆಯ ಹಂಬಲಗಳು ಆಧ್ಯಾತ್ಮಿಕ ಹಂಬಲದ ಹಿನ್ನೆಲೆಯಲ್ಲೇ ಆದರೂ ಹೆಣ್ಣಿನ ಅಸ್ತಿತ್ವದ ಹಂಬಲಗಳಿಗೆ ಸ್ಫೂರ್ತಿಯಾಗುತ್ತವೆ.

ವಚನಕಾರ್ತಿಯರಲ್ಲಿ ಆಧ್ಯಾತ್ಮಿಕ ಸಾಧನೆ ಮತ್ತು ಸಾಮಾಜಿಕ ಬದಲಾವಣೆ ಎಂಬ ಎರಡು ಭಿನ್ನ ಮನೋಭಾವಗಳನ್ನು ಗುರುತಿಸಬಹುದು.ಮೇಲ್ವರ್ಗದ ವಚನಕಾರ್ತಿಯರು ಆಧ್ಯಾತ್ಮಿಕ ಸಾಧನೆಯಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು.ಅವರಲ್ಲಿ ಅಕ್ಕಮಹಾದೇವಿಯಂತಹ ಭಾವತೀವ್ರ ವಚನಕಾರ್ತಿಯರು ಸೇರಿದ್ದಾರೆ.ಮುಕ್ತಾಯಕ್ಕರಂತಹ ಬೌದ್ಧಿಕ ವಚನಕಾರ್ತಿಯರು ಸಾಮಾಜಿಕ ಬದಲಾವಣೆಯಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಇವರಿಬ್ಬರಿಗಿಂತ ಭಿನ್ನವಾಗಿ ಕೆಳವರ್ಗದ ವಚನಕಾರ್ತಿಯರಲ್ಲಿ ಸಾಮಾಜಿಕ ಪ್ರಜ್ಞೆಯೇ ಪ್ರಮುಖವಾಗಿ ಕಾಣುತ್ತದೆ.ಗೊಗ್ಗವ್ವೆ, ಸಂಕವ್ವೆ, ಕಾಳವ್ವೆ ಮುಂತಾದವರ ವಚನಗಳಲ್ಲಿ ಮಿಡಿಯುವ ಸಾಮಾಜಿಕ ಕಳಕಳಿ ಅನನ್ಯವಾದುದು.ಬಸವಣ್ಣನ ಕಾಯಕ ತತ್ವವು ಅವರ ಶ್ರಮಸಂಸ್ಕೃತಿಯ ಹಿನ್ನೆಲೆಯಲ್ಲಿ ಹೊಸ ರೂಪವನ್ನು ಪಡೆದುಕೊಂಡಿತು.ಇದು ಲಿಂಗಾಧಾರಿತ ಶ್ರಮವಿಭಜನೆಯನ್ನು ಅಳಿಸಿ, ಎಲ್ಲ ಬಗೆಯ ಶ್ರಮಕ್ಕೂ ಸಮಾನ ಮೌಲ್ಯವನ್ನು ನೀಡಿತು. ಇದು ಸಮಾಜದಲ್ಲಿ ಸಮಾನತೆ ಮತ್ತು ಸಮಾನ ಅವಕಾಶಗಳನ್ನು ಸ್ಥಾಪಿಸಲು ಸಹಾಯ ಮಾಡಿತು.

ಸಂಕವ್ವಳು ತನ್ನನ್ನು ಸೂಳೆಸಂಕವ್ವೆ ಎಂದು ಕರೆದುಕೊಳ್ಳುವ ಮೂಲಕ ತನ್ನ ಮುಕ್ತಪ್ರಜ್ಞೆಯನ್ನು ಪ್ರಕಟಿಸುತ್ತಾಳೆ.ಈ ಕೆಳವರ್ಗದ ಅನಕ್ಷರಸ್ಥ ಸ್ತ್ರೀಯರು ಅನುಭವ ಮಂಟಪದ ಚರ್ಚೆಗಳಲ್ಲಿ ಭಾಗವಹಿಸುವುದು ಮತ್ತು ವಚನಗಳನ್ನು ರಚಿಸುವುದು ಮಹಿಳಾ ಪ್ರಜ್ಞೆಯ ವಿಕಾಸದ ಪ್ರಮುಖ ಹಂತವಾಗಿದೆ. ಇವರು ವೈಯಕ್ತಿಕ ಪ್ರಶ್ನೆಗಳೊಂದಿಗೆ ಸಾಮಾಜಿಕ ವಿಷಮತೆಯನ್ನು ಪ್ರಶ್ನಿಸುವುದು ಸಹ ಈ ವಿಕಾಸದ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ವಚನಕಾರ್ತಿಯರ ನಿಬ್ಬೆರಗಾಗುವಂತಹ ಸಾಧನೆಗಳ ಹಿಂದೆ, ಒಂದು ಸಮೂಹ ಚಳವಳಿಯ ಬೆಂಬಲವೂ ಇತ್ತು ಎಂಬುದನ್ನು ನೆನಪಿಟ್ಟುಕೊಳ್ಳುವುದು ಮುಖ್ಯ. ವಚನ ಚಳವಳಿಯ ಸಮಾಜಮುಖೀ ಚಿಂತನೆಯು ಎಲ್ಲ ಬಗೆಯ ದಾಸ್ಯಗಳಿಂದ ಮುಕ್ತವಾದ ಸಮಾಜವನ್ನು ನಿರ್ಮಿಸುವ ಗುರಿಯನ್ನು ಹೊಂದಿತ್ತು.ವಚನ ಚಳವಳಿಯು ಲಿಂಗಾಧಾರಿತ ಅಸಮಾನತೆಗಳನ್ನು ನಿರ್ಮೂಲಿಸುವ ಮೂಲಕ ಪ್ರಜಾಪ್ರಭುತ್ವದ ಬೇರುಗಳಿಗೆ ನೆಲೆಯನ್ನು ಒದಗಿಸಿತು. ಈ ಚಳವಳಿಯು ಮಹಿಳಾ ಸ್ವಾತಂತ್ರ್ಯಕ್ಕಾಗಿ ನಡೆದ ಒಂದು ಚಳವಳಿಗಿಂತ ಹೆಚ್ಚಾಗಿ, ಅಸಮಾನ ನೆಲೆಯಲ್ಲಿ ರೂಪುಗೊಂಡ ದಮನಕಾರಿ ವ್ಯವಸ್ಥೆಯಿಂದ ಸಾಮುದಾಯಿಕ ಬಿಡುಗಡೆಗಾಗಿ ಮತ್ತು ಸಮಾನ ನೆಲೆಯಲ್ಲಿ ಆರೋಗ್ಯಕರ ಸಮಾಜವೊಂದರ ನಿರ್ಮಾಣಕ್ಕಾಗಿ ನಡೆದ ಒಂದು ರಚನಾತ್ಮಕ ಚಳವಳಿಯಾಗಿತ್ತು. ಈ ಚಳವಳಿಯಲ್ಲಿ ಹಕ್ಕುಗಳಿಗಿಂತ ಕರ್ತವ್ಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಯಿತು.ಈ ಚಳುವಳಿಯ ಧಾರ್ಮಿಕ ಮತ್ತು ಸಾಮಾಜಿಕ ಆಶಯಗಳು ಸ್ತ್ರೀಯರ ಅಭಿವ್ಯಕ್ತಿಯನ್ನು ರೂಪಿಸಿದವು.ಆದರೆ ಕೆಲವು ಸ್ತ್ರೀಯರು ಅಕ್ಕನಂತೆಯೇ ಈ ಆಶಯಗಳನ್ನು ಮೀರಿ ತಮ್ಮದೇ ಆದ ಅನನ್ಯತೆಯನ್ನು ವ್ಯಕ್ತಪಡಿಸಿದರು. ಸಾಮಾಜಿಕ ನ್ಯಾಯದ ಬಗ್ಗೆ ತಮ್ಮ

ದೃಢವಾದ ನಂಬಿಕೆಯಿಂದ ಪ್ರೇರಿತರಾಗಿ, ಅಕ್ಕಮಹಾದೇವಿಯಂತಹ ಶಿವಶರಣೆಯರು, ಅನೇಕ ಸಾಮಾಜಿಕ ಸ್ತರಗಳಿಂದ ಬಂದವರು, ವಚನಗಳನ್ನು ರಚಿಸಿದರು ಎಂದು ತಿಳಿದುಬರುತ್ತದೆ.ಆದರೆ ಇಂದಿಗೂ ವಚನಗರ್ತಿ ಎಂದೊಡನೆ ಎಲ್ಲರೂ ಹೇಳುವುದು ಅಕ್ಕನ ಹೆಸರನ್ನು ಮಾತ್ರ.

ಇತರ ಶರಣೆಯರಾದ ಅಕ್ಕಮ್ಮ, ಅಮ್ಮುಗೆ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಕಾಳವ್ವ, ಮಸಣವ್ವ, ಕದಿರರೆಮ್ಮವ್ವೆ, ರೇಮಮ್ಮ, ರೇಚವ್ವ, ಕಾಮಮ್ಮ, ಲಕ್ಷ್ಮಮ್ಮ, ಸೋಮಮ್ಮ, ಗಂಗಾಂಬಿಕೆ, ಕೇತಲದವಿ, ವೀರಮ್ಮ, ದುಗ್ಗಲೆ, ನಾಗಲಾಂಬಿಕೆ, ನೀಲಮ್ಮ, ಗುಡ್ಡವ್ವ, ಬೊಂತಾದೇವಿ, ಮುಕ್ತಾಯಕ್ಕ, ಮೋಳಿಗೆ ಮಹಾದೇವಿ, ರಾಯಮ್ಮ, ರೇಕಮ್ಮ, ಸತ್ಯಕ್ಕ, ಲಿಂಗಮ್ಮ, ಗಂಗಮ್ಮ ಇವರುಗಳು ಅಕ್ಕನಿಗೆ ಸಮಕಾಲೀನರಾಗಿ ಬರೆದರು ಎಂಬ ಒಂದು ಅಂಶವನ್ನು ಬಿಟ್ಟು ವಚನಕಾರ್ತಿಯರಲ್ಲಿ ಹೇಳಿಕೊಳ್ಳಬಹುದಾದ ಯಾವ ಅಂಶವೂ ಇಲ್ಲ. ಭಾಷೆ, ಭಾವ, ವಸ್ತು, ಸಂವೇದನೆ ಎಲ್ಲದರಲ್ಲಿಯೂ ಬೆಳಕನ್ನು ಹುಡುಕುತ್ತಿದ್ದ ಶಿವಶರಣೆಯರು, ಅಕ್ಕಮಹಾದೇವಿ, ಬಸವಣ್ಣ, ಅಲ್ಲಮನವರನ್ನು ತಮ್ಮ ಶರಣುಗಳಾಗಿ ಸ್ವೀಕರಿಸಿದರು. ಅಂದರೆ ಅಲ್ಪಸ್ವಲ್ಪ ಬದಲಾಯಿಸಿ ಬರೆದಿದ್ದರೂ ಇವು ಉತ್ಕೃಷ್ಟ ರಚನೆಗಳಾಗಿರಲಿಲ್ಲ. ಶಿವಶರಣೆಯರಿಗೆ ಸಂವೇದನೆಗಳು ಮತ್ತು ಅನುಭವಗಳಿದ್ದರೂ ಅಕ್ಕಮಹಾದೇವಿಯಂತೆ ಅಭಿವ್ಯಕ್ತಿಶೀಲ ಭಾಷಾ ಸಾಮರ್ಥ್ಯವಿರಲಿಲ್ಲ. ಹಾಗಾಗಿ ಅವರ ವಚನಗಳು ಅಕ್ಕಮಹಾದೇವಿಯ ವಚನಗಳಷ್ಟು ಪ್ರಭಾವಶಾಲಿ ಆಗಲಿಲ್ಲ. ಇದಲ್ಲದೆ, ಶಿವಶರಣೆಯರು ಮದುವೆಯಾಗಿ ಗೃಹಿಣಿಯರಾಗಿ ಬಾಳುತ್ತಿದ್ದರು. ಅಕ್ಕಮಹಾದೇವಿಯಂತೆ ಅವರು ಅಲೌಕಿಕ ಗಂಡನನ್ನು ಹೊಂದಿರಲಿಲ್ಲ. ಸ್ತ್ರೀವಾದಿ ತಾತ್ವಿಕತೆಯು ವಚನಕಾರ್ತಿಯರ ಚಿಂತನೆಗಳಿಗೆ ಒಂದು ಮುಖ್ಯ ಪ್ರಭಾವವಾಗಿತ್ತು.ಆದರೆ ಈ ಪ್ರಭಾವವು ಒಂದೇ ದಿಕ್ಕಿನಲ್ಲಿರಲಿಲ್ಲ. ಸ್ತ್ರೀಯರು ಮತ್ತು ಪುರುಷರು ಪರಸ್ಪರರನ್ನು ಪ್ರಭಾವಿಸುತ್ತಾ ಬೆಳೆದರು.ವಚನಕಾರ್ತಿಯರ ಚಿಂತನೆಗಳು ಸ್ತ್ರೀವಾದಿ ತಾತ್ವಿಕತೆಯ ದೃಷ್ಟಿಯಿಂದ ಕೆಲವು ಮಿತಿಗಳನ್ನು ಹೊಂದಿದ್ದರೂ, ಅವುಗಳಲ್ಲಿ ವಿಶ್ವದಾದ್ಯಂತದ ಪ್ರಜ್ಞಾಜಾಗೃತಿಯನ್ನು ಉತ್ತೇಜಿಸುವ ಸಾಮರ್ಥ್ಯವಿದೆ.

ವಚನಕಾರ್ತಿಯರು ತಮ್ಮ ವೈಚಾರಿಕತೆಯ ಮೂಲಕ ಭಾರತೀಯ ಚಿಂತನೆಯಲ್ಲಿ ಒಂದು ಹೊಸ ಯುಗವನ್ನು ಆರಂಭಿಸಿದರು.ಅವರ ವೈಚಾರಿಕತೆಯು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಹೊಸ ಆಲೋಚನೆಗಳನ್ನು ಬೆಳೆಸಿತು.ಇದು ಸಮಾಜದ ಎಲ್ಲಾ ಸ್ತರಗಳಲ್ಲಿ ವ್ಯಾಪಿಸಿತು ಮತ್ತು ಜನರ ಜೀವನ ಮತ್ತು ಆಲೋಚನೆಯನ್ನು ರೂಪಿಸಿತು.ಸರಿಯಾದ ದೃಷ್ಟಿಯಿಂದ ಗ್ರಹಿಸಿದರೆ, ಇಂದು ನಾವು ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಸಾಧ್ಯವಾಗುವಷ್ಟು ವ್ಯಾಪಕವಾದ ಒಂದು ತತ್ವವಿದೆ. ಈ ತತ್ವವು ಸಾಮಾಜಿಕ ಸಂಘಟನೆಯಿಂದ ಹಿಡಿದು ಸಾಹಿತ್ಯಿಕ ಪ್ರಯೋಗಶೀಲತೆಯವರೆಗೆ ಎಲ್ಲಾ ಕ್ಷೇತ್ರಗಳಿಗೆ ಅನ್ವಯಿಸುತ್ತದೆ. ಅದೊಂದು ಧಾರ್ಮಿಕ ಸಾಹಿತ್ಯವೆಂಬ ಮುದ್ರೆಯನ್ನೊತ್ತಿ ಪರಿಮಿತಿಯ ವಲಯಕ್ಕೆ ತಳ್ಳುವುದಾಗಲಿ, ಅಲ್ಲಿರುವ ಮೂಲಭೂತ ಮೌಲ್ಯಗಳನ್ನು ಕೆಲಸಕ್ಕೆ ಬಾರದ ಸಂಗತಿಗಳೆಂಬ ವೈಚಾರಿಕ ಭ್ರಮೆಯ ಅವಿಚಾರದಿಂದ ವಚನಗಳ ರೂಪವನ್ನಷ್ಟೇ ಹಿಡಿದು ಎಳೆದಾಡುವುದಾಗಲಿ ಅಥವಾ ಸಾಹಿತ್ಯ ಪ್ರಜ್ಞೆ ಅವರಿಗೆ ಇರಲಿಲ್ಲವೆಂದು ಅವುಗಳ ಸಾಹಿತ್ಯಿಕ ಮಹತ್ವವನ್ನು ಅಲ್ಲಗಳೆಯುವ ಅಪ್ರಜ್ಞೆಯಾಗಲಿ, ನಮ್ಮ ಪರಿಮಿತಿಗೆ ಕನ್ನಡಿಯಾಗಬಲ್ಲವೆ ಹೊರತು, ಅವುಗಳ ಮಹತ್ವವನ್ನು ಮುಸುಳಿಸಲಾರವು. ಯಾವುದೇ ಧಾರ್ಮಿಕ ಸಾಹಿತ್ಯವನ್ನು ನೋಡುವಾಗ ಆ ಧರ್ಮದ ಹಿಂದೆ ಅದಕ್ಕೆ ಬೆನ್ನೆಲುಬಾಗಿ ನಿಂತಿರುವ ವೈಚಾರಿಕ ನಿಲುವನ್ನು ಅದು ಭಾಷೆಯಲ್ಲಿ ಸಾಧಿತವಾಗಿರುವ ಸಾಧ್ಯತೆಗಳನ್ನೂ ಅದರ ಪರಿಣಾಮಗಳನ್ನೂ ಪೂರ್ಣದೃಷ್ಟಿಯಿಂದ ಪರಿಶೀಲಿಸಬೇಕಾಗುತ್ತದೆ. ಅಂತಹ ಪರಿಶೀಲನೆ ಹೆಚ್ಚು ಹೆಚ್ಚಾಗಿ ನಡೆದಷ್ಟು ವಚನ ಸಾಹಿತ್ಯದ ಎತ್ತರ ಬಿತ್ತರಗಳು ಇನ್ನೂ ಸ್ಪಷ್ಟವಾಗಿ ಗೋಚರವಾಗುತ್ತದೆ ಎನ್ನುವುದು ಡಾ. ಹೆಚ್. ತಿಪ್ಪೇರುದ್ರಸ್ವಾಮಿಯವರ ಅಭಿಪ್ರಾಯವಾಗಿದೆ.

**ರಾಜಾಶ್ರಯದಲ್ಲಿ ಬೆಳೆದ ಮಹಿಳಾ ಸಾಹಿತ್ಯ: (೧೬೭೩–೧೭೦೪)**

ಹನ್ನೆರಡನೆಯ ಶತಮಾನದಲ್ಲಿ ಜನಪ್ರಿಯವಾದ ವಚನ ಸಾಹಿತ್ಯವು ನಂತರದ ಶತಮಾನಗಳಲ್ಲಿ ಪ್ರಭುತ್ವದಿಂದ ಕುಗ್ಗಿಸಲ್ಪಟ್ಟಿತು.ವಚನಕಾರ್ತಿಯರು ಹೊಂದಿದ್ದ ಮುಕ್ತ ಚಿಂತನೆ ಮತ್ತು ವ್ಯಕ್ತಿತ್ವದ ಅಭಿವ್ಯಕ್ತಿಗೆ ಅನುಮತಿ ನೀಡುವ ವಾತಾವರಣವು ಕಳೆದುಹೋಯಿತು.

**ಸಂಚಿಹೊನ್ನಮ್ಮ**

ಹನ್ನೆರಡನೆಯ ಶತಮಾನದ ಅಕ್ಕಮಹಾದೇವಿ ಮತ್ತಿತರ ವಚನಕಾರ್ತಿಯರ ನಂತರ ಕೇಳಬರುವ ಪ್ರಮುಖ ಸ್ತ್ರೀಧ್ವನಿ ಸಂಚಿ ಹೊನ್ನಮ್ಮನದು. ಸಂಚಿ ಎಂದರೆ ಚೀಲ; ಹೊನ್ನಮ್ಮ ಎಲೆಯಡಕೆಯ ಚೀಲವನ್ನು ಹಿಡಿದು ಚಿಕ್ಕದೇವರಾಯ ಒಡೆಯರ ರಾಜಾಶ್ರಯದಲ್ಲಿ ರಾಜ – ರಾಣಿಯರ ಸಮೀಪವರ್ತಿಯಾಗಿ ಕೆಲಸ ಮಾಡಿಕೊಂಡಿದ್ದವಳು. ಅರಮನೆಯ ಊಳಿಗದ ಹೆಣ್ಣಾದ ಇವಳು ಸಿಂಗರರ್ಯನಿಂದ ವ್ಯಾಸಂಗವನ್ನು ಪಡೆದು 'ಹದಿಬದೆಯ ಧರ್ಮ' ಎಂಬ ಕಾವ್ಯವನ್ನು ಬರೆದು ಕವಯಿತ್ರಿಯಾದಳು. ಈ 'ಹದಿಬದೆಯ ಧರ್ಮ' (ಪತಿವ್ರತೆಯರ ಧರ್ಮ ಅಥವಾ ಕರ್ತವ್ಯ)ಎನ್ನುವುದು ಗೃಹಿಣೀ ಧರ್ಮದ ಕೈಪಿಡಿ. ಪತಿವ್ರತಾ ಧರ್ಮವನ್ನು ಬೋಧಿಸುವ ಸಾಂಪ್ರದಾಯಿಕ ಕೃತಿ. ಗಂಡನೊಡನೆ ಗರತಿಯಾಗಿ ಸುಗಮವಾಗಿ ಸಂಸಾರ ಮಾಡುವ ಹೆಣ್ಣಿಗೆ ಹೇಳಿದ ಬುದ್ಧಿವಾದದಂತಿದೆ ಈ ಕಾವ್ಯ.ಧರ್ಮಶಾಸ್ತ್ರದಲ್ಲಿರುವ ಸಂಗತಿಗಳನ್ನೆಲ್ಲಾ ಸಂಗ್ರಹಿಸಿ ಕನ್ನಡದ ಹೆಣ್ಣು ಮಕ್ಕಳಿಗೆ ತಿಳಿಯುವಂತೆ ಸಾಂಗತ್ಯದಲ್ಲಿ ಈ ನೀತಿ ಕಾವ್ಯ ರಚಿತವಾಗಿದೆ. ಪಾರಂಪರಿಕವಾದ ಹೆಣ್ಣಿನ ಅಧೀನತೆಯ ಕಲ್ಪನೆಯನ್ನು ಒಪ್ಪಿಕೊಂಡು ರಚಿತವಾದ ಈ ವಚನ ಸಂಕಲನದಲ್ಲಿ ಸ್ತ್ರೀಪರವಾದ ಮತ್ತು ಆಕೆಯಲ್ಲಿ ಆತ್ಮಾಭಿಮಾನ ಅಥವಾ ಪ್ರಜ್ಞಾಜಾಗೃತಿ ಮೂಡಿಸುವ ಯಾವುದೇ ಅಂಶಗಳಿಲ್ಲ. ಆದರೂ ಸ್ತ್ರೀಯ ಧ್ವನಿಯನ್ನು ಗುರುತಿಸುವ ಸಂದರ್ಭಗಳಲ್ಲಿ ಹೊನ್ನಮ್ಮನ ಹೆಸರು ಪದೇ ಪದೇ ಕೇಳಿಬರುತ್ತದೆ. ಹದಿಬದೆಯ ಧರ್ಮದಲ್ಲಿ ಆಕೆ ಹೇಳಿದ :

"ಪೆಣ್ಣಲ್ಲವೆ ತಮ್ಮನೆಲ್ಲ ಪಡೆದತಾಯಿ
ಪೆಣ್ಣ ಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು"

ಹೊನ್ನಮ್ಮನಂತಹವರು ಪತಿವ್ರತಾಧರ್ಮವನ್ನು ಆರಾಧಿಸುವದು, ಅದನ್ನೇ ಬೋಧಿಸುವದು ಸಾಂಸ್ಕೃತೀಕರಣಗೊಂಡ ಮನಸ್ಸುಗಳ ದಾಸ್ಯವನ್ನು ಸೂಚಿಸುತ್ತದೆ. ಹೆಣ್ಣು ತನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಪೋಷಿಸುವ ಮತ್ತು ಬೆಳೆಸುವ ತಾಯಿಯ ಪಾತ್ರವನ್ನು ನಿರ್ವಹಿಸುತ್ತಾಳೆ, ತನ್ನ ಮಕ್ಕಳನ್ನು ರಕ್ಷಿಸುವ ಮತ್ತು ಅವರಿಗೆ ಸುರಕ್ಷಿತವಾದ ವಾತಾವರಣವನ್ನು ಒದಗಿಸುವ ಜವಾಬ್ದಾರಿಯನ್ನು ಕೂಡ ಹೊಂದಿರುತ್ತಾಳೆ.ಆಕೆ ತನ್ನ ಕುಟುಂಬ ಮತ್ತು ಸಮಾಜಕ್ಕೆ ಒಂದು ಅವಿಭಾಜ್ಯ ಅಂಗವಿದ್ದಂತೆ.ಹಾಗಾಗಿ ಮಹಿಳೆಯರನ್ನು ಗೌರವಿಸಬೇಕು ಮತ್ತು ಅವರನ್ನು ಗೌರವದಿಂದ ನಡೆಸಿಕೊಳ್ಳಬೇಕು

ಎನ್ನುವುದನ್ನು ತಮ್ಮ ವಚನದಲ್ಲಿ ಸ್ಪಷ್ಟಿಸಿದ್ದಾರೆ. ಸುತ್ತಲೂ ಪುರುಷ ಪ್ರಧಾನ ವ್ಯವಸ್ಥೆ ಹಾಗೂ ಪ್ರಭುತ್ವದ ನಿಯಂತ್ರಣದಲ್ಲಿ ಆಕೆಯ ಅಭಿವ್ಯಕ್ತಿ ಮುರುಟಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ ಮನೆಯ ಧರ್ಮಾಶ್ರಮ, ಮನೆವಾಳ್ತೆಯ ಧರ್ಮ, ಇನಿಯ ನೊಲವಿನ ದೇವಪೂಜೆ, ಒಡೆಯನಿಟ್ಟಂತಿಪ್ಪುದು ಒಡವೆಗುಚಿತ, ಎಂಬಂತಹ ಮನೋಭಾವದ ಮಧ್ಯೆಯೇ ಆಕೆ ಎತ್ತಿದ ಹೆಣ್ಣಿನ ಸ್ವಾಭಿಮಾನದ ಪ್ರಶ್ನೆ ಆ ಸಂದರ್ಭದಲ್ಲಿ ಗಮನಾರ್ಹವಾದುದು.

### ಶೃಂಗಾರಮ್ಮ

ಚಿಕ್ಕದೇವರಾಜನ ಪೋಷಣೆಯಿಂದ ಬೆಳೆದ ಶೃಂಗಾರಮ್ಮ 'ಪದ್ಮಿನೀ ಕಲ್ಯಾಣ' ಎಂಬ ಕೃತಿಯನ್ನು ಬರೆದಿದ್ದಾಳೆ.ಇದರಲ್ಲಿ ೧೭೭೭ಸಾಂಗತ್ಯ ಪದ್ಯಗಳಿವೆ. ತಿರುಪತಿಯ ಶ್ರೀನಿವಾಸನಿಗೂ ಪದ್ಮಾವತಿಗೂ ನಡೆದ ವರ್ಣನೆಯಿರುವ ಕೃತಿಯಿದು.ಈ ವಸ್ತುವನ್ನು ಆಯ್ಕೆ ಮಾಡಿಕೊಂಡು ಕೃತಿ ರಚಿಸಿದ ಮಹಿಳೆಯರ ಪೈಕಿ ಶೃಂಗಾರಮ್ಮನೇ ಮೊದಲಿಗಳು.ನಾರಾಯನಪುರದ ಅರಸನಾದ ಆಕಾಶರಾಯನಿಗೆ ಮಕ್ಕಳಿಲ್ಲದ ಕಾರಣ ಅವನು ಪುತ್ರಕಾಮೇಷ್ಠಿಯಾಗ ಮಾಡುವುದಕ್ಕಾಗಿ ಭೂಮಿ ಅಗೆಯುವಾಗ ಹೆಣ್ಣುಮಗು ಸಿಕ್ಕುತ್ತದೆ.ಆ ಮಗುವೇ ಪದ್ಮಾವತಿ.ಆಕೆ ಬೆಳೆದು ದೊಡ್ಡವಳಾದ ಮೇಲೆ ಒಮ್ಮೆ ಸಖಿಯರೊಡನೆ ವನವಿಹಾರಕ್ಕೆ ತೆರಳುತ್ತಾಳೆ. ಅಲ್ಲಿಗೆ ವೆಂಕಟೇಶ್ವರನೂ ಬಂದಿರುತ್ತಾನೆ. ವೆಂಕಟೇಶ ಪದ್ಮಾವತಿಯಲ್ಲಿ ವಿವಾಹ ಪ್ರಸ್ತಾಪ ಮಾಡುತ್ತಾನೆ. ಆಗ ಪದ್ಮಿನಿ ಒಂಟಿಯಾದ ಹೆಣ್ಣು ಮಕ್ಕಳನ್ನು ಮಾತನಾಡಿಸುವುದು ಉಚಿತವಲ್ಲ. ನೀನು ಕೂಡಲೆ ಹೊರಟು ಹೋಗು. ನನ್ನ ತಂದೆಗೆ ದೂರು ನೀಡಿದರೆ ನಿನ್ನ ಕಿವಿ ಮೂಗನ್ನು ಹರಿದು ಕಳುಹಿಸುತ್ತಾನೆ ಎಂದು ಅತ್ಯಂತ ಸ್ವಾಭಿಮಾನದಿಂದ ದಿಟ್ಟತನದಿಂದ ಉತ್ತರಿಸುತ್ತಾಳೆ. ಕಡೆಗೆ ಇವರಿಬ್ಬರಿಗೂ ಕಲ್ಯಾಣವಾಗುತ್ತದೆ.ಇದೇ ಈ ಕೃತಿಯ ಪ್ರಧಾನವಸ್ತು.

ಹೀಗೆ ಸಂಚಿಹೊನ್ನಮ್ಮ, ಶೃಂಗಾರಮ್ಮ ಇಬ್ಬರೂ ಚಿಕ್ಕದೇವರಾಯನ ಆಶ್ರಯದಲ್ಲಿ ಬೆಳೆದು ಅರಮನೆಯ ವಾತಾವರಣದಲ್ಲಿ ವಿದ್ಯಾಭ್ಯಾಸ ಮಾಡಿ ರಾಜರಾಣಿಯರ, ಗುರುಹಿರಿಯರ ಪ್ರೋತ್ಸಾಹದಿಂದ ಕೃತಿ ರಚಿಸಿದರು. ಶಿವಶರಣೆಯರ ವಚನಗಳನ್ನು ಕಾವ್ಯದ ಗುಣಮಟ್ಟದ ಅಳತೆಗೋಲಿನಿಂದ ಅಳೆಯುವುದು ಸರಿಯಲ್ಲ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಕೊಡುಗೆ ಅತ್ಯಂತ ಕಡಿಮೆ ಇದ್ದ ಸಂದರ್ಭದಲ್ಲಿ, ಶಿವಶರಣೆಯರು ತಮ್ಮ ವಚನಗಳ ಮೂಲಕ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದರು.

### ಚೆಲುವಾಂಬೆ: (೧೭೧೩–೧೭೩೨)

ಹದಿನೆಂಟನೆಯ ಶತಮಾನದ ಆರಂಭದಲ್ಲಿ, ಮೈಸೂರಿನ ದೊರೆ ದೊಡ್ಡ ಕೃಷ್ಣರಾಜ ಒಡೆಯರ ನಾಲ್ಕನೆಯ ಪಟ್ಟ ಮಹಿಷಿಯಾದ ಚೆಲುವಾಂಬೆ ಶ್ರೇಷ್ಠ ಕವಯತ್ರಿಯಾಗಿದ್ದಳು.ದೊಡ್ಡ ಕೃಷ್ಣರಾಜ ಒಡೆಯರು ದಕ್ಷ ರಾಜನಾಗದಿದ್ದರೂ, ಪಂಡಿತರನ್ನು ಪ್ರೋತ್ಸಾಹಿಸಿದರು ಮತ್ತು ಅವರ ಸಹಾಯದಿಂದ ಹಲವಾರು ಗ್ರಂಥಗಳನ್ನು ರಚಿಸಲಾಯಿತು. ದೊಡ್ಡ ಕೃಷ್ಣರಾಜ ಒಡೆಯರು ತಮ್ಮ ಪಟ್ಟ ಮಹಿಷಿಯಾದ ಚೆಲುವಾಂಬೆಯನ್ನು ಸಾಹಿತ್ಯ ರಚನೆಗೆ ಪ್ರೋತ್ಸಾಹಿಸಿದರು. ಹಾಗಾಗಿ ಚೆಲುವಾಂಬೆ ವರನಂದೀ ಕಲ್ಯಾಣ, ವೆಂಕಟಾಚಲ, ಮಾಹಾತ್ಮ್ಯ ಲಾಲಿಪದ, ಅಲಮೇಲುಮಂಗೈ ಲಾಲಿಪದ ಮುಂತಾದುವನ್ನು ರಚಿಸಿದ್ದಾಳೆ. 'ವರನಂದೀ ಕಲ್ಯಾಣ' ಇದೊಂದು ಸಾಂಗತ್ಯ ಕೃತಿಯಾಗಿದ್ದು, ೮೮೧ ಪದ್ಯಗಳನ್ನೊಳಗೊಂಡಿದೆ. "ಯದುಗಿರಿಯರೇಯನ ಚಾರಿತ್ರ್ಯವನ್ನು ನೆರೆ ಸೊಬಗಿನೊಳುಸುರು" ಎಂದು ಹೇಳಲು ಅದನ್ನು ಶಿರದೊಳಾಂತು ಈ ಕಾವ್ಯವನ್ನು ರಚಿಸಿದನೆಂದು ಚೆಲುವಾಂಬೆ ಹೇಳಿಕೊಂಡಿದ್ದಾಳೆ. ಸತ್ಯಭಾಮೆಯ ಅವತಾರವಾದ ವರನಂದಿಯ ಕಥೆ ಇದರಲ್ಲಿದೆ.ವರನಂದಿ ಚೆಲುವರಾಯಸ್ವಾಮಿಯನ್ನು ಮದುವೆಯಾಗುವುದೆ ಇದರ ಪ್ರಧಾನ ವಸ್ತು.ವೆಂಕಟೇಶನ ಸ್ತುತಿಯಿಂದ ಪ್ರಾರಂಭವಾಗುವ ಈ ಕೃತಿ ಅನಂತರ ಗುರು ಪರಂಪರೆಗೆ ಎರಗಿ, ವ್ಯಾಸ ವಾಲ್ಮೀಕಿ ಮೊದಲಾದ ಕವಿಗಳಿಗೆ ವಂದಿಸಿ ಪರಕಾಲ ಗುರುವಿನ ಅನುಜ್ಞೆಯೊಳು ವೆಂಕಟೇಶನಿಗೂ ಅಲಮೇಲು ಮಂಗೆಗೂ ಶರಣು ಮಾಡಿ ಚೆಲುವಾಂಬೆ ತನ್ನ ಗ್ರಂಥವನ್ನು ಆರಂಭಿಸಿದ್ದಾಳೆ. 'ವೆಂಕಟಾಚಲ ಮಾಹಾತ್ಮ್ಯ ಲಾಲಿಪದ' ಕೃತಿಯಲ್ಲಿ ೨೦೩ಲಾಲಿಪದಗಳಿವೆ. ವೆಂಕಟಾಚಲವು ಭಕ್ತರಿಗೆ ಪ್ರಿಯವಾದ ಪುಣ್ಯಕ್ಷೇತ್ರವಾಗಿದೆ.ಚೆಲುವಾಂಬೆಯು ಈ ಕ್ಷೇತ್ರದ ಮಹಿಮೆಯನ್ನು ಸುಂದರವಾದ ಲಾಲಿ ಪದ ಮತ್ತು ಜೋಗುಳಗಳ ಮೂಲಕ ವರ್ಣಿಸಿದ್ದಾರೆ.ಹೀಗೆ ಚೆಲುವಾಂಬೆ ಕರ್ನಾಟಕದ ಕವಿಯತ್ರಿಯರಲ್ಲಿ ಒಬ್ಬಳು. ಈಕೆ ವಿನಯಶೀಲೆಯಾಗಿದ್ದು, ತನ್ನದೆ ಆದ ಮುಗ್ಧ ರೀತಿಯಲ್ಲಿ ಕೃತಿಗಳನ್ನು ರಚಿಸಿದ್ದಾಳೆ. ಸುಲಲಿತವಾದ ಭಾವ ಮತ್ತು ಮಧುರ ಪದಬಂಧಗಳಿಂದ ಸರಳ ಶೈಲಿಯಲ್ಲಿ ಈಕೆ ತನ್ನ ಕೃತಿಗಳನ್ನು ರಚಿಸಿದ್ದಾಳೆ.ಹದಿನೆಂಟನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು, ಚೆಲುವಾಂಬೆಯ ಕೃತಿಗಳನ್ನು ಅಧ್ಯಯನ ಮಾಡುವುದು ಅತ್ಯಗತ್ಯವಾಗಿದೆ.

ಹೀಗೆ ಸಾಂಪ್ರದಾಯಿಕ ಮನೋಭಾವದಡಿಯಲ್ಲಿ ಕಾವ್ಯರಚಿಸಿದ ಹೊನ್ನಮ್ಮನಾಗಲೀ, ಶೃಂಗಾರಮ್ಮನಾಗಲೀ, ಚೆಲುವಾಂಬೆಯಾಗಲಿ, ಗಿರಿಯಮ್ಮನಾಗಲೀ ಅಕ್ಕಮಹಾದೇವಿಯಂತೆ ಕ್ರಾಂತಿಕಾರಕವಾದುದೇನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಪುರುಷ ಪ್ರಧಾನ ಸಮಾಜದ ಮೌಲ್ಯಗಳೇ ಒಪ್ಪಿ ಮುನ್ನಡೆಯುವ ಅನಿವಾರ್ಯತೆ ಅವರಿಗಿತ್ತು. ಅದನ್ನೇ ಅವರು ತಮ್ಮ ಕಾವ್ಯಗಳಲ್ಲಿ ಪ್ರತಿಬಿಂಬಿಸಬೇಕಾಯಿತು.

### ಪರಾಮರ್ಶನ ಗ್ರಂಥಗಳು


೧. ಡಾ. ಅಕ್ಕಮಹಾದೇವಿ – ಮಹಿಳಾ ಸಾಹಿತ್ಯ, ಚೇತನಾ ಬುಕ್ ಹೌಸ್, ಮೈಸೂರು

೨. ರಾಮಚಂದ್ರಪ್ಪ ಬರಗೂರು (ಸಂ.) –ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು/ ವಿವಿಧ ಲೇಖಕರು–ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೩. ೦೩.ಡಾ. ಬಸವರಾಜ ಸಬರದ – ವಚನ ಚಳುವಳಿ – ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಬೆಂಗಳೂರು

೪. ೦೪.ಡಾ. ಆರ್. ಸಿ. ಹಿರೇಮಠ – ಸಂಕೀರ್ಣ ವಚನ ಸಂಪುಟ –ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೫. ೦೫.ಕೀರ್ತಿನಾಥ ಕುರ್ತಕೋಟಿ – ಕನ್ನಡ ಸಾಹಿತ್ಯ ಸಂಗಾತಿ– ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್– ಧಾರವಾಡ

೬. ೦೬.ಡಾ. ಹೆಚ್. ತಿಪ್ಪೇರುದ್ರಸ್ವಾಮಿ – ವಚನಸಾಹಿತ್ಯ ವೈಚಾರಿಕ ಅಧ್ಯಯನ

೭. ೦೭.ಡಾ. ಸಂಧ್ಯಾ ವಿ. – ಪ್ರಾಚೀನ ಕರ್ನಾಟಕದ ಮಹಿಳಾಲೋಕ– ಕದಂಬ ಪ್ರಕಾಶನ, ಬೆಂಗಳೂರು

೮. ಡಾ. ಎಂ. ಎಸ್. ಆಶಾದೇವಿ –ಬೆಳಕಿಗಿಂತ ಬೆಳ್ಳಗೆ – ಸಾಹಿತ್ಯ ಅಕಾಡೆಮಿ, ನವದೆಹಲಿ